# ಕೋಮಲ್ 'ಕಾಮಿಡಿ' ಪುಟಗಳು

ನೋಡುತ್ತಿದ್ದಾರೆ. ಆಸ್ಕರ್ ಪಡೆದ 'ಪ್ಯಾರಾಸೈಟ್' ಎಂಬ ಕೊರಿಯನ್ ಚಿತ್ರದ ನಿರ್ದೇಶಕ, 'ನನ್ನ ಒಂದೂವರೆ ಇಂಚು ಸಬ್‌ಟೈಟಲ್‌ನಿಂದ ಇಡೀ ವಿಶ್ವಕ್ಕೆ ನಾನು ರೀಚ್ ಆದೆ' ಎಂದು ಹೇಳಿಕೊಂಡಿದ್ದಾನೆ. ಒಂದು ಸಬ್ ಟೈಟಲ್, ಭಾಷೆ ಅರ್ಥವಾಗದಿದ್ದರೂ ಕಥೆಯನ್ನು ನಾಟಿಸುತ್ತದೆ. ಅದೇ ರೀತಿ ಕನ್ನಡ ಸಿನಿಮಾಗಳು ಚೌಕಟ್ಟನ್ನು ದಾಟಿ ಹೋಗುತ್ತಿವೆ. ಅಂಥ ಪ್ರಯತ್ನಗಳು ನಡೆಯುತ್ತಿವೆ' ಎಂದು ಈಚಿನ ಕೆಲ ವರ್ಷಗಳಲ್ಲಿ ಕನ್ನಡ ಚಿತ್ರರಂಗ ಕಂಡ ಬದಲಾವಣೆಯನ್ನು ವಿಶ್ಲೇಷಿಸುತ್ತಾರೆ.

ಸಿನಿಮಾ ವಿತರಕರಾಗಿ ಚಿತ್ರರಂಗಕ್ಕೆ ಬಂದ ಕೋಮಲ್, ಹಾಸ್ಯನಟನಾಗಿ ತೆರೆಯಲ್ಲಿ ಹೆಸರಾದರು. ಎಮೋಷನಲ್ ಪಾತ್ರದಲ್ಲೂ ಗೆದ್ದ ಅವರು, ವಿಲನ್ ಆಗಿಯೂ ಬಣ್ಣ ಹಚ್ಚಿದರು. ಇವೆಲ್ಲದರ ಜೊತೆಗೆ ಹೊಸತನದ ಹುಡುಕಾಟ ಮುಂದುವರೆದಿರುವುದಾಗಿ ಹೇಳುತ್ತಾರೆ.

'ಸಿನಿಮಾ ವಿತರಕನಾದಾಗ ನನಗೆ 19 ವರ್ಷ. ಪಕ್ವತೆ ಇಲ್ಲದೆ, ವಿತರಕನಾಗಿ ಸೋತರೂ ಅನುಭವವೆಂಬ ದೊಡ್ಡ ಪಾಠ ಸಿಕ್ಕಿತು. ಈ ನಡುವೆ, ನನ್ನನ್ನು ಹೀರೊ ಮಾಡುವ ಪ್ರಯತ್ನ ನಡೆಯಿತು. ಆದರೆ ಆ ಸಿನಿಮಾ ದೊಡ್ಡ ಫ್ಲಾಪ್ ಆಯಿತು. ಅದಾದ ಮೇಲೆ ಮೂರ್ನಾಲ್ಕು ವರ್ಷ ಯಾವ ಸಿನಿಮಾನೂ ಸಿಗಲಿಲ್ಲ. ನಂತರ ಸಣ್ಣಪುಟ್ಟ ಪಾತ್ರಗಳಿಗೆ ಕರೆಯಲು ಆರಂಭಿಸಿದರು. ಸುಮ್ಮನೆ ಕೂರುವುದೇಕೆ ಎಂದು ಹಲವು ಪಾತ್ರಗಳನ್ನು ಮಾಡಿದೆ...' ತಮ್ಮ ಸಿನಿಮಾ ಬದುಕಿನ ಸೋಲು ಗೆಲುವುಗಳನ್ನು ತಾಳೆ ಹಾಕಿದರು ಕೋಮಲ್.



ಹೀಗೆ ಬಂದ ಕೋಮಲ್ ಅವರ ಗೆಲುವಿಗೆ ಮುನ್ನುಡಿ ಬರೆದಿದ್ದು ಅವರೊಳಗಿನ 'ಹಾಸ್ಯ'.

'ನಾನು ಸಹಜವಾಗಿ ಮಾತನಾಡುವುದೇ ಜನರಿಗೆ ನಗು ತರುತ್ತಿದೆಯಲ್ಲಾ ಎಂದು ನನಗೇ ಆಶ್ಚರ್ಯವಾಗುತ್ತಿತ್ತು. ನಮ್ಮನ್ನು ನಾವೇ ಅವಮಾನಿಸಿಕೊಳ್ಳೋದು, ನಮ್ಮ ಕಾಲನ್ನು ನಾವೇ ಎಳೆದುಕೊಳ್ಳೋದು ಆವತ್ತಿನ ಕಾಮಿಡಿ. ನನ್ನ ಮಾತಿನ ಶೈಲಿಗೆ ಈ ಹಾಸ್ಯವನ್ನು ಪರಿವರ್ತಿಸಿಕೊಂಡೆ. ಅದು ಜನರಿಗೆ ಇಷ್ಟವಾಯಿತು. ಈ ಹಾಸ್ಯದ ಸೂತ್ರ ನನ್ನನ್ನು ಚೆನ್ನಾಗಿ ನಡೆಸಿತು. ಇದರ ನಡುವೆ 'ತವರಿಗೆ ಬಾ ತಂಗಿ' ಸೆಂಟಿಮೆಂಟ್ ಸಿನಿಮಾದಲ್ಲಿ ನಟಿಸುವ ಅವಕಾಶ ಬಂತು. ಆ ಪಾತ್ರವನ್ನೂ ಹೊಗಳಿದರು. ವಿಲನ್ ಆಗಿ ಮಾಡಿದೆ, ಅದನ್ನೂ ಮೆಚ್ಚಿದರು. ಕಾಮಿಡಿ ಎನ್ನುವುದೇ ತುಂಬಾ ಕಷ್ಟ. ಅದನ್ನು ಮಾಡಿದರೆ ಮಿಕ್ಕಿದ್ದೆಲ್ಲಾ ಹಿಂದೆ ಬರುತ್ತದೆ ಎನ್ನುವುದು ನನಗೆ ಮನವರಿಕೆಯಾಯಿತು' ಎಂದು ತಮ್ಮ 'ಕಾಮಿಡಿ' ಹಿಂದಿನ ಕಥೆಯನ್ನು ತೆರೆದಿಟ್ಟರು.

'ನನ್ನೊಳಗೆ ಒಬ್ಬ ಎಡಿಟರ್ ಇದ್ದಾನೆ. ಎಷ್ಟು ಹಾಸ್ಯ ಬೇಕು, ನೋಡುಗರಿಗೆ ಯಾವುದರಲ್ಲಿ ರೀಚ್ ಆಗುತ್ತೇನೆ ಎಂದು ಸದಾ ಎಚ್ಚರಿಸುತ್ತಿರುತ್ತಾನೆ' ಎಂದು ನಗುತ್ತಾರೆ. ಕೋಮಲ್ ಅವರ ಸಿನಿಮಾ ಬದುಕಲ್ಲಿ ಏಳುಬೀಳು ಕೂಡ ಕಡಿಮೆಯಿರಲಿಲ್ಲ. ಸಾಲು ಸಾಲು ಸಿನಿಮಾಗಳಲ್ಲಿ ಕಾಣಿಸಿಕೊಂಡ ನಂತರ ಮತ್ತೆ 2 ವರ್ಷ ಅವಕಾಶಗಳು ಖಾಲಿಯಾದವು. ಈ 'ಶೂನ್ಯ'ದ ಅವಧಿ ಅವರಿಗೆ ಮತ್ತೊಂದು ಹೊಸ ತಕ್ಕೆ ದಾರಿ ಮಾಡಿಕೊಟ್ಟಿತು.

'ಆ ಸಮಯದಲ್ಲಿ 'ಗರಗಸ' ಎಂಬ ಸಿನಿಮಾ ಮಾಡಿದೆ. ಆ ಇಡೀ ಸಿನಿಮಾದಲ್ಲಿ ನಾನೊಬ್ಬನೇ ಮಾತಾಡೋದು. ಅಷ್ಟು ಮಾತಾಡಿದರೂ ಯಾರಿಗೂ ಬೋರ್ ಅನಿಸಲಿಲ್ಲ. ಆಗ 40 ಲಕ್ಷದಲ್ಲಿ ಮಾಡಿದ ಸಿನಿಮಾ, 2 ಕೋಟಿವರೆಗೂ ಬಿಸಿನೆಸ್ ಮಾಡಿತು. ಇಷ್ಟೆಲ್ಲಾ ಸರ್ಕಸ್‌ಗಳ ನಡುವೆ ನಿರ್ದೇಶಕ, ನಿರ್ಮಾಪಕರಿಗೆ ನನ್ನ ಮೇಲೆ ಧೈರ್ಯ ಬಂತು. ಆಮೇಲೆ ಹೀರೊ ಆದೆ...' ಎಂದು ನಾಯಕನಟನಾದ ಬಗೆಯನ್ನು ನೆನಪಿಸಿಕೊಳ್ಳುತ್ತಾರೆ.

ಈ ನಡುವೆ ಸ್ಥೂಲಕಾಯ ಅವರಿಗೆ ಅಡ್ಡಿ ಎನಿಸಿತ್ತು. ಇದಕ್ಕಾಗಿ, 103 ಕೆ.ಜಿ ಇದ್ದ ಅವರು 2 ವರ್ಷಗಳಲ್ಲಿ 27 ಕೆ.ಜಿ. ಕಳೆದುಕೊಂಡು 'ಕೆಂಪೇಗೌಡ' ಸಿನಿಮಾದಲ್ಲಿ ನಟಿಸಿದರು.

ಸಿನಿಮಾರಂಗದಲ್ಲಿ ಅಣ್ಣನ ಪ್ರಭಾವಳಿಯ ಹೊರತಾಗಿ ತಮ್ಮದೇ ಗುರುತು ಸೃಷ್ಟಿಸಿಕೊಳ್ಳಬೇಕೆಂಬ ಎಚ್ಚರಿಕೆ ಗಂಟೆ ಅವರಲ್ಲಿ ಸದಾ ಇದ್ದೇ ಇತ್ತು. 'ಅನಂತನಾಗ್ ಅವರು ಕಾಮಿಡಿ ಮಾಡಿದರೆ, ಅವರ ಸೋದರ ಶಂಕರ್‌ನಾಗ್ ಗಂಭೀರ ಪಾತ್ರಗಳನ್ನು ಮಾಡಿದರು. ಆದರೆ ನಾನು, ನನ್ನಣ್ಣ ಜಗ್ಗೇಶ್ ಇಬ್ಬರೂ ಹಾಸ್ಯದ ಪ್ರಕಾರದಲ್ಲಿದ್ದೆವು. ಅಣ್ಣನ ಕಾಮಿಡಿ ಅದಾಗಲೇ ಪ್ರಸಿದ್ಧಿ ಆಗಿತ್ತು. ಇದರ ಹೊರತಾಗಿ ಬೇರೇನಾದರೂ ಮಾಡಬೇಕೆಂಬ ಲೆಕ್ಕಾಚಾರದಲ್ಲಿಯೇ, ನನ್ನ ಅಣ್ಣನ ಕಾಮಿಡಿ ಧಾಟಿಯ ಛಾಯೆಯೇ ಇಲ್ಲದ ರೀತಿ ಹಾಸ್ಯ ನೀಡುವುದಕ್ಕೆ ಸಾಕಷ್ಟು ಹೋಂವರ್ಕ್ ಮಾಡಿಕೊಂಡೆ. ನನ್ನದು 'ಇಂಟೆಲೆಕ್ಚುಯಲ್ ಕಾಮಿಡಿ'ಯಂತೆ ಹೆಸರು ಮಾಡಿತು...' ಎನ್ನುತ್ತಾರೆ.

ಇಂಥದ್ದೊಂದು ಸ್ವತಂತ್ರ ಆಲೋಚನೆ ತಮ್ಮಲ್ಲಿ ಎಳೆವಯಸ್ಸಿನಿಂದಲೇ ಬಂದಿದ್ದಾಗಿ ಹೇಳುತ್ತಾರೆ.

'ಆಗಿನ ಕಾಲದಲ್ಲಿ ಊಟಿಯ ಬೋರ್ಡಿಂಗ್ ಸ್ಕೂಲ್‌ನಲ್ಲಿ ಓದಬೇಕೆಂದರೆ ತುಂಬಾ ಖರ್ಚಾಗುತ್ತಿತ್ತು. ತಿಂಗಳಿಗೆ ಎರಡೂವರೆ ಸಾವಿರ ರೂಪಾಯಿ ಫೀಸ್. ಆ ಬೋರ್ಡಿಂಗ್ ಶಾಲೆ, ಸ್ವತಂತ್ರ ಭಾವನೆಯನ್ನು ಬಹಳ ಚಿಕ್ಕ ವಯಸ್ಸಿಗೇ ತಂದುಕೊಟ್ಟಿತು. ಆಗ ನನಗೆ 10ರಿಂದ 12 ವರ್ಷ ಅಷ್ಟೆ. ಬಸ್‌ನಲ್ಲಿ ನನ್ನೊಬ್ಬನನ್ನೇ ಕೂರಿಸಿಬಿಟ್ಟರೆ, ಊಟಿಯಲ್ಲಿ ಇಳಿಯುತ್ತಿದ್ದೆ. ಆಗಲೇ ನನ್ನೊಳಗೊಂದು ಸ್ವತಂತ್ರ ಆಲೋಚನೆ ಆರಂಭವಾಗಿತ್ತು ಎನಿಸುತ್ತದೆ. ನನಗೆ 8 ಭಾಷೆಗಳು ಬರುತ್ತವೆ. ಆ ಎಲ್ಲಾ ಭಾಷೆಗಳನ್ನೂ ನಾನು ನನ್ನ ಶಾಲೆಯ ಸ್ನೇಹಿತರ ಮೂಲಕವೇ ಕಲಿತಿದ್ದು' ಎಂದು ತಮ್ಮ ವ್ಯಕ್ತಿತ್ವ ರೂಪಿಸಿದ ಬಾಲ್ಯದ ದಿನಗಳನ್ನು ನೆನೆಯುತ್ತಾರೆ.

ತಮಗೂ, ಕಾಮಿಡಿ ಪಾತ್ರಗಳಿಗೂ ಇರುವ ನಂಟಿನತ್ತ, ತಮ್ಮನ್ನು ಗೆಲ್ಲಿಸಿದ 'ಕಾಮಿಡಿ'ಯತ್ತ ಮಾತು ಹೊರಳಿಸಿದರು ಕೋಮಲ್.

'ನನಗೆ ಆಗ ಅವಕಾಶ ಸಿಕ್ಕಿದ್ದೆಲ್ಲಾ ಕಾಮಿಡಿ ಪಾತ್ರದ್ದಾಗಿತ್ತು. ನಾನು ಕೂಡ ಜನರು ಕೇಳುತ್ತಿದ್ದ ಕಾಮಿಡಿಯನ್ನೇ ಕೊಡುತ್ತಿದ್ದೆ. ಇದಾಗ್ಯೂ ನಾನು ಕ್ರಿಯಾಶೀಲವಾಗಿರಬೇಕೆಂಬ ಎಚ್ಚರಿಕೆ ಇದ್ದೇ ಇತ್ತು' ಎನ್ನುತ್ತಾರೆ.

ಹಲವು ಅನುಭವಗಳನ್ನು ಒಟ್ಟುಗೂಡಿಸಿ ಚಿತ್ರರಂಗಕ್ಕೆ ಮರಳಿರುವ ಕೋಮಲ್, ಆ ಅನುಭವಗಳ ತಕ್ಕಡಿಯಲ್ಲಿ ತಮ್ಮ ಮುಂದಿನ ಪ್ರಯತ್ನ ನಡೆಸುವುದಾಗಿ ಹೇಳುತ್ತಾರೆ.

'ಒಬ್ಬ ಕಲಾವಿದನಾದವನು ಚೌಕಟ್ಟನ್ನು ಮೀರಿ ಬೆಳೆಯಬೇಕು. ಆ ಚೌಕಟ್ಟು ದಾಟಿ ಹೋಗಬೇಕಾದರೆ ಬೇರೆ ಬೇರೆ ರೀತಿಯ ಪಾತ್ರಗಳನ್ನು ಮಾಡಬೇಕು. ಅಂಥ ಕಥೆಗಳನ್ನೇ ಆಯ್ಕೆ ಮಾಡುವುದು ನನ್ನ ಆದ್ಯತೆ. ಅದರಲ್ಲಿ 'ಕಾಲಾಯ ನಮಃ' ಕೂಡ ಒಂದು. ಸಿನಿಮಾರಂಗದ ಆಗುಹೋಗುಗಳನ್ನು ಗಮನದಲ್ಲಿಟ್ಟುಕೊಂಡು, ತಾಜಾ ವಿಷಯ ನೀಡುವ ಪ್ರಯತ್ನ ಇದರಲ್ಲಿದೆ. ನಾನು ಮಾಡಿಲ್ಲದೇ ಇರುವಂಥ ಪಾತ್ರ ಮಾಡಿದ್ದೇನೆ. ಇದು ಕೂಡ ನನ್ನ ಹೊಚ್ಚಹೊಸ ಪ್ರಯತ್ನ' ಎನ್ನುತ್ತಾರೆ.

ಕಲಾವಿದನಾದವನಿಗೆ ಸದಾ ಹುಡುಕಾಟ ಎಂಬುದು ಇದ್ದೇ ಇರಬೇಕೆನ್ನುವುದು ಕೋಮಲ್ ನಿಲುವು. ಹಾಗೆಯೇ, ಸಿನಿಮಾ ಜಗತ್ತಿನಲ್ಲಿನ ತಮ್ಮ ಹುಡುಕಾಟ ಏನೆಂಬುದನ್ನು ಹಂಚಿಕೊಳ್ಳುತ್ತಾರೆ.

'ಸಿನಿಮಾರಂಗಕ್ಕೆ ಬಂದಾಗಿನಿಂದ ನನ್ನೊಳಗೆ ಕನಸಿದೆ. ಆ ಕನಸನ್ನು ನನಸಾಗಿಸಿಕೊಳ್ಳುವ ಪ್ರಯತ್ನ ಮಾಡುತ್ತಲೇ ಇದ್ದೇನೆ. ಅದಕ್ಕಾಗಿ ನನ್ನೊಳಗೆ ಹೋರಾಟ ಮಾಡುತ್ತಲೇ ಇದ್ದೇನೆ. ನನ್ನನ್ನು ನಾನು ಸಂಪೂರ್ಣವಾಗಿ ಶೋಕೇಸ್ ಮಾಡಿಕೊಳ್ಳಲು ಸಾಧ್ಯವಾಗುವಂಥ ಪಾತ್ರಗಳ ಕನಸು, ಹುಡುಕಾಟವದು' ಎನ್ನುತ್ತಾರೆ.

'ಫ್ಯಾಮಿಲಿ ಬೇಸ್'ನಲ್ಲಿ ಕಾಮಿಡಿ ತಮಗೆ ಸಾಕಷ್ಟು ಹೆಸರು ತಂದುಕೊಟ್ಟಿದೆ. ಆದರೆ ಹೆಸರಿನೊಂದಿಗೆ ಕಮರ್ಷಿಯಲ್ ಆಗಿ ಯಶಸ್ಸು ಸಿಗುವುದೂ ಈಗ ಅಷ್ಟೇ ಮುಖ್ಯವಾಗಿದ್ದು, ಆ ಹಾದಿಯಲ್ಲಿ ತಮ್ಮ ಪ್ರಯತ್ನ ಮುಂದುವರೆಸಿರುವುದಾಗಿ ಹೇಳುತ್ತಲೇ, 'ಈಗ ಅದಕ್ಕೆ ಕಾಲ ಕೂಡಿ ಬರುವ ಲಕ್ಷಣವಿದೆ' ಎಂದು ಆಶಾಭಾವನೆ ವ್ಯಕ್ತಪಡಿಸುತ್ತಾರೆ. ■